**ಸಾಕ್ಷಿಯನ್ನು ದಿನಾಂಕ: 06-07-2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು :- 14 ರಿಂದ 16 ನೇ ಪ್ರತಿವಾದಿಗಳ ಪರ ವಕೀಲರಿಂದಃ**

ನಾನು 10 ನೇ ತರಗತಿಯನ್ನು ಓದಿರುತ್ತೇನೆ. ನನಗೆ ಆಂಗ್ಲ ಭಾಷೆ ಓದಲು ಮತ್ತು ಅರ್ಥ ಮಾಡಿಕೊಳ್ಳಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ಎಂದು ಮಾಹಿತಿ ಇರುತ್ತದೆ. ವಾದ ಪತ್ರದಲ್ಲಿ ತೋರಿಸಿರುವ ಆಸ್ತಿಗಳ ಪೈಕಿ ಯಾವ ಸ್ವತ್ತು ಖರೀದಿ ಮಾಡಿರುತ್ತಾರೆ ಮತ್ತು ಯಾವ ಸ್ವತ್ತು ವಾರಸುದಾರಿಕೆಯಲ್ಲಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜನ ಹೆಸರು ಮಲ್ಲಿಯಪ್ಪ. ಅವರು ವ್ಯವಸಾಯ ಮಾಡುತ್ತಿದ್ದರು. ಅವರು ನಾಗಮಂಗಲದಲ್ಲಿ ವಾಸ ಮಾಡುತ್ತಿದ್ದರು. ಅವರ ಮಕ್ಕಳೆಲ್ಲರೂ ಒಂದೇ ಮನೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ನಮ್ಮ ಹಳೆ ಒಟ್ಟು ಕುಟುಂಬದ ಮನೆಯಲ್ಲಿ 5 ನೇ ಪ್ರತಿವಾದಿ ವಾಸ ಮಾಡುತ್ತಿದ್ದರು. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ನಮ್ಮ ಅಜ್ಜನ ತಂದೆ ಹೆಸರು ನನಗೆ ಗೊತ್ತಿರುವುದಿಲ್ಲ. ನಮ್ಮ ಮುತ್ತಜ್ಜನಿಗೆ 3 ಜನ ಮಕ್ಕಳಿದ್ದರು ಅವರುಗಳು ಮಲ್ಲಿಯಪ್ಪ, ಗುಂಡಪ್ಪ ಮತ್ತು ಅಂಜಿನಪ್ಪ ಆಗಿರುತ್ತದೆ. ನಮ್ಮ ಮುತ್ತಜ್ಜನವರು ದಿನಾಂಕಃ 04-12-1978 ರಂದು ವಿಭಾಗ ಮಾಡಿಕೊಂಡಿದ್ದರು ಎಂದರೆ ಗೊತ್ತಿಲ್ಲ. ಸದರಿ ವಿಭಾಗ ಪತ್ರ ನೋಂದಣಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗ ಪತ್ರದಲ್ಲಿ ಕೆಲವು ಸ್ವತ್ತುಗಳು ನಮ್ಮ ಅಜ್ಜನಿಗೆ ಬಂದಿರುತ್ತವೆ ಎಂದರೆ ಸರಿ. ಸದರಿ ವಿಭಾಗ ಪತ್ರದ ಅಡಿಯಲ್ಲಿ ವಾದ ಪತ್ರದ ಐಟಂ ನಂ.7 ನಮ್ಮ ತಾತ ಖರೀದಿ ಮಾಡಿದ ಸ್ವತ್ತು ಎಂದರೆ ಸರಿ. ನಮ್ಮ ತಾತ ಖರೀದಿ ಮಾಡಿದರಿಂದ ಅದು ಅವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ದಿನಾಂಕಃ 22-07-1961 ರಂದು ಐಟಂ ನಂ.7 ನ್ನು ನಮ್ಮ ತಾತ ರಂಗಮ್ಮ ರವರ ಕುಟುಂಬದಿಂದ ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ದಿನಾಂಕಃ 04-07-2006 ರಂದು ನಮ್ಮ ತಾತ ಡಿ.ಎಸ್.ಅರವಿಂದನ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನು ಭೂ-ಪರಿವರ್ತನೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 2012 ರಲ್ಲಿ ಭೂ-ಪರಿವರ್ತನೆಯಾದ ನಂತರ ಬೇರೆಯವರಿಗೆ ಮಾರಾಟವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಐಟಂ ನಂ.7 ಈಗ ವ್ಯವಸಾಯದ ಜಮೀನಾಗಿರುವುದಿಲ್ಲ ಎಂದರೆ ಸರಿಯಲ್ಲ. ಐಟಂ ನಂ.7 ಈಗ ವ್ಯವಸಾಯದ ಜಮೀನು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸಿರುತ್ತೇನೆ. ಐಟಂ ನಂ.7 ಈಗ ನಿವೇಶನ ಮಾಡಿ ಸೈಟ್ ಗಳನ್ನು ಬೇರೆಯವರಿಗೆ ಮಾರಾಟವಾಗಿರುತ್ತದೆ ಎಂದರೆ ಸರಿಯಲ್ಲ.

ವಾದ ಪತ್ರದ ಐಟಂ ನಂ.6 ನಮ್ಮ ತಾತ ದಿನಾಂಕಃ 17-08-1987 ರಂದು ಮುನಿರಾಜುರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕೆ.ಆರ್. ಮುನಿರಾಜುರವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಮ್ಮ ತಾತನಿಗೆ ಮುನಿಯಮ್ಮ ಮತ್ತು ಗೌರಮ್ಮ ಎಂಬ ಇಬ್ಬರು ಹೆಂಡತಿಯರು ಎಂದರೆ ಸರಿ. 2 ನೇ ಹೆಂಡತಿ ಕೆ.ಆರ್. ಮುನಿರಾಜು ರವರಿಗೆ ದಿನಾಂಕಃ 26-06-2015 ರಂದು Confirmation Deed ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಿತು).

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**